ಹೋದರೆ ಪಕ್ಕದಲ್ಲಿರತಕ್ಕ ಬಡವರ ಮರ ಗಿಡಗಳಿಗೆ ಸಹ ಈ ರೋಗ ತಗಲತಕ್ಕಂತಹ ಸಾಧ್ಯತೆ ಇದೆ. ಆದುದರಿಂದ, ಇವರೂ ಸಹ ಚಿಟ್ಟು ಮದ್ದು ಹಾಕಿಸಲು ಮುಂದೆ ಬರಬೇಕು. ಇದರ ಬಗ್ಗೆ ರೇಡಿಯೋ, ಪತ್ರಿಕೆಗಳಲ್ಲಿ ಪ್ರಚಾರ ಮಾಡುತ್ತಿದ್ದೇವೆ. ಇದಕ್ಕೆ ಜನರ ಸಹಕಾರವೂ ಬೇಕು ಮತ್ತು ತಾವು ಸಹ ಜನರಿಗೆ ತಿಳಿವಳಿಕೆ ಹೇಳಿದರೆ ಇದು ಯಶಸ್ವಿಯಾಗುತ್ತದೆಂದು ನಂಬಿ ನನ್ನ ಮಾತನ್ನು ಮುಗಿಸುತ್ತೇನೆ.

ವಿಷಯ.—ಖಾಸಗಿ ಕಾಲೇಜುಗಳಲ್ಲಿ ಹಿರಿಯ ಪ್ರಾಥಮಿಕ ಹುದ್ದೆಗಳ ರದ್ದತಿ

ಪ್ರ. ಸಂಖ್ಯೆ 51 (208) ಶ್ರೀ ಚಂದ್ರಕಾಂತ ಬೆಲ್ಲದ್ (ಧಾರವಾಡ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಖಾಸಗಿ ಕಾಲೇಜುಗಳಲ್ಲಿ ಈ ದೂದಲಿದ್ದ ಹಿರಿಯ ಪ್ರಾಧ್ಯಾಪಕರ ಹುದ್ದೆಗಳನ್ನು ಯಾವಾಗ ರದ್ದು ಮಾಡಲಾಯಿತು ಮತ್ತು ಅದಕ್ಕೆ ಕಾರಣಗಳೇನು;

ಆ) ಈ ಸೌಲಭ್ಯವನ್ನು ಪುನಃ ನೀಡಲು ಪರಿಶೀಲನೆ ಮಾಡಲಾಗುವುದೆ ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಶ್ರೀ ಚಂದ್ರಕಾಂತ ಬೆಲ್ಲದ.—ನನ್ನ (ಅ) ಪ್ರಶ್ನೆ ಖಾಸಗೀ ಕಾಲೇಜುಗಳಲ್ಲಿ ಈ ಮೊದಲಿದ್ದ ಹಿರಿಯ ಪ್ರಾಧ್ಯಾಪಕರ ಹುದ್ದೆಗಳನ್ನು ಯಾವಾಗ ರದ್ದುಮಾಡಲಾಯಿತು ಮತ್ತು ಅದಕ್ಕೆ ಕಾರಣಗಳೇನು ಎಂದು ಕೇಳಿದ್ದಕ್ಕೆ ಮಂತ್ರಿಗಳು ಉತ್ತರದಲ್ಲಿ 'ಇಲ್ಲ' ಎಂದು ಹೇಳಿದ್ದಾರೆ, ಇದಕ್ಕೆ ನಾವು ಏನೆಂದು ತಿಳಿದು ಕೊಳ್ಳಬೇಕು? ಹುದ್ದೆಗಳನ್ನು ರದ್ದುಮಾಡಿಲ್ಲವೆಂದು ನಾವು ತಿಳಿದುಕೊಳ್ಳಬೇಕೆ? ಅಥವಾ.....

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು).—ಹೌದು ಹುದ್ದೆಗಳನ್ನು ರದ್ದುಮಾಡಿಲ್ಲವೆಂದು ತಿಳಿದು ಕೊಳ್ಳಬೇಕು.

ಶ್ರೀ ಜಿ. ಚಂದ್ರಕಾಂತ ಬೆಲ್ಲದ.—ಸೇವಾ ಜ್ಯೇಷ್ಠತೆಯ ಪ್ರಕಾರ ಅವರಿಗೆ ಸಿಗಬೇಕಾದಂತಹ 100 ರೂಪಾಯಿ ಸಿಗುತ್ತಿದೆಯೆ ?

ಶ್ರೀ ಎಂ. ರಘುಪತಿ.—ಹೌದು ಈಗ ಅದು ಸಿಗುತ್ತಿದೆ.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಸಿ.ಎಂ. ರೇವಣಸಿದ್ಧಯ್ಯ.—ಸದಸ್ಯರು ಹಾಜರಿಲ್ಲ.

ವಿಷಯ.—ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

ಪ್ರ. ಸಂಖ್ಯೆ 53 (217) ಶ್ರೀ ಯು. ಭೂಪತಿ (ಸಂಡೂರು) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಕರ ಹುದ್ದೆಗಳು ಜೂಲಿ ಇರುವುದರಿಂದ ಶಾಲಾ ಮಕ್ಕಳಿಗಾಗುತ್ತಿರುವ ತೊಂದರೆಯು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಎಷ್ಟು ಅವಧಿಯಲ್ಲಿ ಖಾಲಿ ಇರುವ ಸದರಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು?

ಶ್ರೀ ಹೆಚ್.ಜಿ. ಗೋವಿಂದೆಗೌಡ (ಪ್ರಾಥಮಿಕ ಹಾಗೂ ವಯಸ್ಕರ ರಾಜ್ಯ ಸಚಿವರು).—

ಅ) ಬಂದಿದೆ.

ಆ) ಬೀದರ್ ಜಿಲ್ಲೆಯನ್ನು ಹೊರತುಪಡಿಸಿ ಎಲ್ಲಾ ಜಿಲ್ಲೆಗಳಲ್ಲಿಯೂ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ಈಗಾಗಲೇ ಭರ್ತಿ ಮಾಡಲಾಗಿದೆ. ಬೀದರ್ ಜಿಲ್ಲೆಯಲ್ಲಿ ನೇಮಕಾತಿ ಅಭ್ಯರ್ಥಿಗಳ ಪಟ್ಟಿಯಲ್ಲಿ ಕೆಲವು ದೋಷ ಕಂಡು ಬಂದಿದ್ದು, ಅವುಗಳ ಬಗ್ಗೆ ಸರ್ಕಾರವು ಶೀಘ್ರವಾಗಿ ತೀರ್ಮಾನ ಕೈಗೊಳ್ಳಲಿದೆ.

ಶ್ರೀ ಯು. ಭೂಪತಿ.—ಗ್ರಾಮಾಂತರಪ್ರದೇಶಗಳಲ್ಲಿ ಖಾಲಿಯಿರತಕ್ಕ ಶಾಲಾ ಶಿಕ್ಷಕರ ಹುದ್ದೆಗಳನ್ನು ಭರ್ತಿಮಾಡಿದ್ದೀರಾ? ಅವುಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇತ್ತು? ಎಷ್ಟು ಹುದ್ದೆಗಳನ್ನು ಭರ್ತಿಮಾಡಿದ್ದೀರಿ ? ಯಾವ ರೀತಿಯಾಗಿ ಭರ್ತಿಮಾಡಿದ್ದಾರೆ ? ನತಂರ ಕಾಂಟ್ರಾಕ್ಟ್ ಮತ್ತು ಲೋಕಲ್ ಕ್ಯಾಂಡಿಡೇಟ್‌ಗಳಾಗಿ ಕೆಲಸಮಾಡುತ್ತಿದ್ದ ಶಿಕ್ಷಕರನ್ನು ಸೇವೆಯಿಂದ ತೆಗೆದುಹಾಕಿದ್ದರಿಂದ, ಈ ಶಿಕ್ಷಕರ ಸ್ಥಾನಗಳು ಖಾಲಿಯಾಗತಕ್ಕ ಪರಿಸ್ಥಿತಿ ಬರಲಿಲ್ಲವೆ ? ಇದರ ಬಗ್ಗೆ ಮಂತ್ರಿಗಳು ವಿವರಣೆ ಕೊಡಬೇಕು.

ಶ್ರೀ ಹೆಚ್.ಜಿ. ಗೋವಿಂದೆಗೌಡ (ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು).—ಪ್ರತಿಯೊಂದು ಜಿಲ್ಲೆಯಲ್ಲೂ ಜಿಲ್ಲಾ ಮಟ್ಟದ ನೇಮಕಾತಿ ಸಮಿತಿ ಮೂಲಕ 29ವರ್ಷ ಆಗಿರ ತಕ್ಕವರನ್ನು ಮೆರಿಟ್‌ಮೇಲೆ ಆಯ್ಕೆ ಮಾಡಿದ್ದೇವೆ. ಸ್ಥಳೀಯ ಅಭ್ಯರ್ಥಿಗಳಾಗಿ ಕೆಲಸಮಾಡುತ್ತಿದ್ದವರನ್ನು ಹಂಗಾಮಿಯಾಗಿ ಮುಂದುವರಿಸಿಕೊಂಮ ಬಂದಿದ್ದೇವೆ. ಹುದ್ದೆಗಳು ಖಾಲಿಯಿರತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದೆ. ಅವುಗಳನ್ನು ಭರ್ತಿ ಮಾಡುವ ಬಗ್ಗೆ ಆದಷ್ಟು ಜಾಗ್ರತೆ ಸೂಕ್ತಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಯು· ಭೂಪತಿ.—ನನ್ನ ಪ್ರಶ್ನೆಯನ್ನು ಮಾನ್ಯಮಂತ್ರಿಗಳು ಅರ್ಥಮಾಡಿಕೊಳ್ಳಲಿಲ್ಲ. ನಾನು ಕೇಳಿದ್ದು ಇಷ್ಟೆ. ಎಷ್ಟು ಖಾಲಿ ಇತ್ತು ಎಷ್ಟು ಹುದ್ದೆಗಳನ್ನು ಭರ್ತಿಮಾಡಿದ್ದೀರಿ, ಅದಕ್ಕೆ ಸರಿಯಾಗಿ ಉತ್ತರ ಕೊಡಬೇಕು.

ಶ್ರೀ ಹೆಚ್.ಜಿ. ಗೋವಿಂದೆಗೌಡ.—ಎಷ್ಟು ಹುದ್ದೆಗಳನ್ನು ಖಾಲಿ ಇತ್ತು ಭರ್ತಿಮಾಡಿದ್ದೇವೆ ಎನ್ನುವ ಮಾಹಿತಿ ನನ್ನ ಹತ್ತಿರ ಈಗ ಇಲ್ಲ.

ಶ್ರೀ ಯು. ಭೂಪತಿ.—ತಾವೇ ತಮ್ಮ ಉತ್ತರದಲ್ಲಿ ಹೇಳಿದ್ದೀರಿ, ಬೀದರ್ ಜಿಲ್ಲೆಯನ್ನು ಹೊರತುಪಡಿಸಿ ಎಲ್ಲಾ ಜಿಲ್ಲೆಗಳಲ್ಲಿಯೂ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ಈಗಾಗಲೇ ಭರ್ತಿ ಮಾಡಿದ್ದೇವೆಂದು ಹೇಳಿದ್ದೀರಿ. ಮಾಹಿತಿ ಇಲ್ಲದೆ ಹೇಗೆ ಹೇಳಿದ್ದೀರಿ ?

ಶ್ರೀ ಹೆಚ್.ಜಿ. ಗೋವಿಂದೆಗೌಡ.—ಸುಮಾರು 19 ಸಾವಿರ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ಸಾಧ್ಯವಾದಷ್ಟೂ ಬೇಗ ಭರ್ತಿಮಾಡುತ್ತೇವೆ.

ಶ್ರೀ ಯು. ಭೂಪತಿ.—ಸ್ಥಳೀಯ ಅಭ್ಯರ್ಥಿಗಳನ್ನು ಅಂದರೆ ಈ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದ ಅಭ್ಯರ್ಥಿಗಳನ್ನು ಸೇವೆಯಿಂದ ತೆಗೆದುಹಾಕಿರುವುದರಿಂದ ಈ ಪರಿಸ್ಥಿತಿ ಉದ್ಭವ ಆಗಿಲ್ಲವೇ? ಈ ಖಾಲಿ ಹುದ್ದೆಗಳ ಸಂಖ್ಯೆ ಹೆಚ್ಚು ಆಗಿಲ್ಲವೆ ? ಇದಕ್ಕೆ ತಮ್ಮ ಅಭಿಪ್ರಾಯವೇನು ?

ಶ್ರೀ ಹೆಚ್.ಜಿ. ಗೋವಿಂದೆಗೌಡ.—ಈಗ ಕಾಂಟ್ರಾಕ್ಟ್ ಬೇಸಿಸ್ ಮೇಲೆ ಉಳಿದಿರತಕ್ಕವರನ್ನು ಸಧ್ಯದಲ್ಲಿ ತೆಗೆದುಕೊಳ್ಳತಕ್ಕ ವ್ಯವಸ್ಥೆಯನ್ನು ಮಾಡಿದ್ದೇವೆ. ಈಗ ಇರುವ ಖಾಲಿಸ್ಥಳಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡುವ ವ್ಯವಸ್ಥೆ ಮಾಡಲಾಗಿದೆ.

ವಿಷಯ.—ರಾಜ್ಯದ ಕೇಂದ್ರ ಗ್ರಂಥಾಲಯ ಖರೀದಿಸಿರುವ ಪುಸ್ತಕಗಳು

ಪ್ರ. ಸಂಖ್ಯೆ 54 (264) ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಶಿಕ್ಷಣ ಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ರಾಜ್ಯ ಕೇಂದ್ರ ಗ್ರಂಥಾಲಯ ಕನ್ನಡದಲ್ಲಿ ಪ್ರಕಟವಾದ ಹೊಸ ಗ್ರಂಥಗಳನ್ನು ಖರೀದಿ ಮಾಡುವ ಯೋಜನೆಯಲ್ಲಿ ಕೊಳ್ಳಲಾದ ಗ್ರಂಥಗಳೆಷ್ಟು ಹಾಗೂ ನೀಡಲಾದ ಹಣವೆಷ್ಟು ?

(1982-83, 1983-84 ಮತ್ತು 1984-85ನೇ ವರ್ಷಗಳ ವಿವರಗಳನ್ನು ಒದಗಿಸುವುದು)

ಆ) ಪ್ರಕಾಶಕರಿಂದ, ಲೇಖಕರಿಂದ ಈ ಬಗ್ಗೆ ಮನವಿಯಾಗಲಿ, ದೂರುಗಳಾಗಲಿ ಬಂದಿವೆಯೆ? ಹಾಗಿದ್ದಲ್ಲಿ ಅವುಗಳ ನಿವಾರಣೆ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) 4010 ಶೀರ್ಷಿಕೆಗಳನ್ನು ಬಹುಪ್ರತಿಗಳಲ್ಲಿ ಕೊಳ್ಳಲಾಗಿದೆ. ಗ್ರಂಥಾಲಯ ಕರದಿಂದ ಕ್ರೋಢಿಕರಿಸಿದ ಹಣ ರೂ. 65,69.737-00 ವೆಚ್ಚ ಮಾಡಲಾಗಿದೆ.

1982-83, 1983-84 ಮತ್ತು 1984-85ನೇ ಸಾಲಿನಲ್ಲಿ ಯಾವುದೇ ಶೀರ್ಷಿಕೆಗಳನ್ನು ಖರೀದಿಸಿಲ್ಲ ಹಾಗೂ ಹಣ ವೆಚ್ಚ ಮಾಡಿರುವುದಿಲ್ಲ. ಇದರಿಂದ ವಿವರ ಕೊಡುವುದು ಉದ್ಭವಿಸುವುದಿಲ್ಲ.

ಆ) ಬಂದಿವೆ.

ಇಲಾಖೆಯು ಈ ಯೋಜನೆಯನ್ನು ಮುಂದುವರಿಸುವ ಬಗ್ಗೆ ''ವಿಶೇಷ ಧನ ಸಹಾಯ'' ನೀಡ ಬೇಕೆಂದು ಸರ್ಕಾರವನ್ನು ಕೇಳಿದ್ದು ಬೇಡಿಕೆಯನ್ನು ಸರ್ಕಾರವು ಪರಿಶೀಲಿಸುತ್ತಿದೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಮಾನ್ಯ ಅಧ್ಯಕ್ಷರೆ, ಸರ್ಕಾರ ಕೈಗೊಂಡ ಯೋಜನೆಯನ್ನು 1982-83, 1983-84 ಮತ್ತು 1984-85ರಲ್ಲಿ ಈ ಮೂರು ವರ್ಷ ನಿಲ್ಲಿಸಲಿಕ್ಕೆ ಕಾರಣ ವೇನು ? ಪ್ರಕಾಶಕರಿಗೆ ಮತ್ತು ಪುಸ್ತಕ ಬರೆಯತಕ್ಕವರಿಗೆ ತಿಳಿಸಿದ್ದೀರಾ ? ಯೋಜನೆಯನ್ನು ನಿಲ್ಲಿಸುವಾಗ ನೋಟೀಸ್ ಕೊಟ್ಟು ನಿಲ್ಲಿಸಿದ್ದೀರಾ ಅಥವಾ ತಾವು ಏಕೆ ನಿಲ್ಲಿಸಿದ್ದೀರಿ ?